**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಶಾಹಾಪೂರ**
**ಸಿ.ಸಿ ನಂಃ 1801/ 2023**

| | | |
|---|---|---|
| **ಸಾಕ್ಷಿಯ ಹೆಸರುಃ** | **ಪರಶುರಾಮ** | **ಪ್ರಾಸಾಃ 02** |
| **ತಂದೆ/ಗಂಡನ ಹೆಸರುಃ** | **ಹಲವಪ್ಪ** | **ಚಾಸಾಃ 05** |
| **ವಯಸ್ಸುಃ** | **27 ವರ್ಷ** | **ದಿಃ 29-12-2023** |
| **ಉದ್ಯೋಗಃ** | **ಕೂಲಿ** | **ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.** |
| **ವಾಸ ಸ್ಥಳಃ** | **ದರ್ಶನಾಪೂರ** | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ಚಾಸಾ 1 ಮತ್ತು 4 ರವರ ಪರಿಚಯ ಇರುತ್ತದೆ. ಆರೋಪಿತನ ಪರಿಚಯ ಇರುತ್ತದೆ. ನಮ್ಮ ಮತ್ತು ಆರೋಪಿತನ ನಡುವೆ ಬಾಯಿ ಮಾತಿನ ಜಗಳವಾಗಿತ್ತು. ಇದನ್ನು ಹೊರತುಪಡಿಸಿ ಬೇರೆ ಏನೂ ಘಟನೆ ನಡೆದಿರುವುದಿಲ್ಲ. ಘಟನೆಯ ಬಗ್ಗೆ ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋದಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸಹಾಯಕ ಸರಕಾರಿ ಅಭಿಯೋಜಕರು ಭಿನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾಗ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು ಃ ಮಾನ್ಯ ಸ.ಸ.ಅ. ರವರಿಂದಃ**

ದಿಃ 8.2.2023 ರಂದು ಬೆಃ 7.30 ಗಂಟೆಗೆ ನಾನು ಚಾಸಾ 1 ಹಾಗೂ 4 ರವರು ನೀರು ಬರುವ ವಿಚಾರವಾಗಿ ಕೆನಾಲ ಹತ್ತಿರ ಹೊಗಿ ನೋಡಿದಾಗ ಮೇಲಿನ ಹೊಲದಲ್ಲಿ ಆರೋಪಿತನು ನೀರು ಬರುವ ವಿಚಾರವಾಗಿ ನಮೊಂದಿಗೆ ಜಗಳ ತೆಗೆದಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿತನು ಚಾಸಾ 1 ರವರಿಗೆ ಕಟ್ಟಿಗೆಯಿಂದ ಹೊಡೆದು ಗಾಯಗೊಳಿಸಿ ಅವಾಚ್ಯವಾಗಿ ಬೈದಿರುತ್ತಾನೆ ಎಂದರೆ ಸರಿಯಲ್ಲ. ಜೀವ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆಯನ್ನು ತೋರಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಆರೋಪಿತನಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು  ಆರೋಪಿತರ ಪರಃ ಶ್ರೀ ಎಂ.ಎನ್.ಪಿ. ವಕೀಲರವರಿಂದಃ**

ಯಾವುದೇ ಪಾಟೀ ಸವಾಲು ಇರುವುದಿಲ್ಲ.

**ಮರುವಿಚಾರಣೆ : ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಧೀಶರು**
**ಶಾಹಾಪೂರ**